

# ಮಿಕ್ಕಿಮೌಸ್: ಎಪ್ಪತ್ತೈದರ ಸಂಭ್ರಮ!

**ಶ್ರೀನಿಧಿ ಟಿ ಜಿ**

ವಿಜಯ ಕರ್ನಾಟಕದ 17ನೇ ನವೆಂಬರ್ 2002ರ ಸಂಚಿಕೆಯಲ್ಲಿ "ಹ್ಯಾಪಿ ಬರ್ತ್‌ಡೇ ಮಿಕಿ!" ಎಂಬ ತಲೆಬರಹದಡಿಯಲ್ಲಿ ಪ್ರಕಟವಾದ ಬರಹ

ವಿಶ್ವದಾದ್ಯಂತ ಹಿರಿಯರು – ಮಕ್ಕಳು ಎಂಬ ಭೇದವಿಲ್ಲದೆ ಎಲ್ಲರಿಗೂ ಅತ್ಯಂತ ಅಚ್ಚುಮೆಚ್ಚಿನ ಕಾರ್ಟೂನ್ ವ್ಯಕ್ತಿತ್ವವಾಗಿರುವ ಮಿಕ್ಕಿಮೌಸ್ ಈ ನವೆಂಬರ್ 18ರಂದು ಎಪ್ಪತ್ನಾಲ್ಕು ವರ್ಷಗಳನ್ನು ಪೂರೈಸಿ ಎಪ್ಪತ್ತೈದಕ್ಕೆ ಕಾಲಿಡಲಿದೆ.

ಖ್ಯಾತ ಕಾರ್ಟೂನ್ ರಚನೆಕಾರ ವಾಲ್ಟ್ ಡಿಸ್ನಿಯ ಕಲ್ಪನೆಯ ಕೂಸಾದ ಮಿಕ್ಕಿಯ ರಂಗಪ್ರವೇಶವಾದದ್ದು 1928ರ ನವೆಂಬರ್ 18ರಂದು ತೆರೆಕಂಡ "ಸ್ಟೀಮ್‌ಬೋಟ್ ವಿಲ್ಲಿ" ಕಾರ್ಟೂನ್ ಚಿತ್ರದ ಮೂಲಕ. ಅಂದಿನಿಂದ ಇಂದಿನವರೆಗೂ ತನ್ನ ಜನಪ್ರಿಯತೆಯನ್ನು ಹಾಗೆಯೇ ಉಳಿಸಿಕೊಂಡಿರುವ ಮಿಕ್ಕಿಮೌಸ್ ಈ ವಿಶ್ವ ಕಂಡ ಅತ್ಯಂತ ಪ್ರಸಿದ್ಧ ವ್ಯಕ್ತಿತ್ವಗಳಲ್ಲೊಂದಾಗಿ ಇತಿಹಾಸದಲ್ಲಿ ಸ್ಥಾನಪಡೆದಿದೆ.



ಮಿಕ್ಕಿಯ "ಹಿರಿಯಣ್ಣ" ಓಸ್ವಾಲ್ಡ್

ತುಂಟತನವೇ ಮೈವೆತ್ತಂತಿರುವ ಮಿಕ್ಕಿಯ ಹುಟ್ಟಿನ ಕಥೆ ಅತ್ಯಂತ ಕುತೂಹಲಕಾರಿಯಾದದ್ದು. 1928ರ ಪ್ರಾರಂಭದಲ್ಲಿ ವಾಲ್ಟ್ ಡಿಸ್ನಿಯ ಮೊದಲ ಕಾರ್ಟೂನ್ ರಚನೆ "**ಓಸ್ವಾಲ್ಡ್ ದಿ ರ್‍ಯಾಬಿಟ್**"ನ ಹಕ್ಕುಗಳನ್ನು ಆತನ ನಿರ್ಮಾಪಕರು ಯಾವುದೋ ಮನಸ್ತಾಪದ ಕಾರಣದಿಂದ ಹಿಂದಕ್ಕೆ ಪಡೆದುಕೊಂಡುಬಿಟ್ಟರು. ತನ್ನದೇ ರಚನೆಯನ್ನು ತನ್ನಿಂದಲೇ ಕಸಿದುಕೊಂಡ ನಿರ್ಮಾಪಕರ ಕ್ರಮದಿಂದ ನೊಂದ ವಾಲ್ಟ್ ಡಿಸ್ನಿ ನ್ಯೂಯಾರ್ಕ್‌ನಿಂದ ಲಾಸ್ ಏಂಜಲೀಸ್‌ಗೆ ರೈಲಿನಲ್ಲಿ ಹಿಂದಿರುಗುತ್ತಿದ್ದಾಗ ಆತನ ಮನಸ್ಸಿನಲ್ಲಿ ಓಸ್ವಾಲ್ಡ್ ಮೊಲದ ಬದಲು ಮಕ್ಕಳಿಗೆ ಅಷ್ಟೇ ಇಷ್ಟವಾಗಬಲ್ಲ ಇಲಿಯೊಂದರ ಚಿತ್ರ ರೂಪುತಳೆಯಿತು. ಆಕಾರದಲ್ಲಿ ಬಹುತೇಕ ಓಸ್ವಾಲ್ಡ್‌ನಂತೆಯೇ ಇದ್ದ ಈ ಇಲಿಗೆ "**ಮಾರ್ಟಿಮರ್**" ಎಂದು ಹೆಸರಿಡಲು ಡಿಸ್ನಿ ಬಯಸಿದ್ದನಾದರೂ ಆ ಹೆಸರು ಆತನ ಪತ್ನಿಗೆ ಅಷ್ಟೇನೂ ಹಿಡಿಸಲಿಲ್ಲ. ಕೊನೆಗೆ ಈ ಹೊಸ ಇಲಿಗೆ "ಮಿಕ್ಕಿ" ಎಂದು ನಾಮಕರಣ ಮಾಡಿದ್ದು ಶ್ರೀಮತಿ ಡಿಸ್ನಿಯೇ. ಕೊನೆಗೆ ವಾಲ್ಟ್ ಡಿಸ್ನಿ ಹಾಗೂ ಉಬ್ ಇವರ್ಕ್ಸ್ ಜೊತೆಯಾಗಿ ನಿರ್ಮಿಸಿದ "**ಸ್ಟೀಮ್‌ಬೋಟ್ ವಿಲ್ಲಿ**" 1928ರ ನವೆಂಬರ್ 18ರಂದು ತೆರೆಕಂಡು ಅಪಾರ ಜನಮೆಚ್ಚುಗೆ ಪಡೆಯಿತು (ಇದೇ ಚಿತ್ರ ಜಗತ್ತಿನ ಮೊತ್ತಮೊದಲ ಟಾಕಿ ಕಾರ್ಟೂನ್ ಚಿತ್ರ ಕೂಡ). ಅಂದಿನಿಂದ ಇಂದಿನವರೆಗೆ ಮಿಕ್ಕಿಮೌಸ್ ಹಾಗೂ ಡಿಸ್ನಿ ಎಂಬ ಹೆಸರುಗಳು ಒಂದೇ ನಾಣ್ಯದ ಎರಡು ಮುಖಗಳೋ ಎಂಬಂತೆ ವಿಶ್ವವಿಖ್ಯಾತವಾಗಿವೆ.

ಕ್ರೌರ್ಯ – ಹಿಂಸೆಗಳ ಸೋಂಕಿಲ್ಲದ ಅಪ್ಪಟ ಹಾಸ್ಯಮಯ ಮನೋರಂಜನೆಯನ್ನು ಜನಗಳಿಗಿತ್ತ ಮಿಕ್ಕಿಮೌಸ್‌ನ ಖ್ಯಾತಿ ಬಹುಬೇಗನೇ ಉತ್ತುಂಗಕ್ಕೇರಿತು. ಮಿಕ್ಕಿಯ ಜನಪ್ರಿಯತೆ ಹೆಚ್ಚಿದಂತೆ ಕಾರ್ಟೂನ್ ಚಿತ್ರಗಳಲ್ಲಿ ಆತನ ಜತೆಗಾರರಾಗಿ ಡೊನಾಲ್ಡ್ ಡಕ್, ಗೂಫಿ ಮುಂತಾದ ಪಾತ್ರಗಳೂ ಜನ್ಮತಳೆದವು. ಹಾಗೆಯೇ ಮಿಕ್ಕಿಯ ಪ್ರೇಯಸಿಯಾಗಿ ಮಿನ್ನಿಮೌಸ್, ಕುಟುಂಬದ ಸದಸ್ಯರಾಗಿ ಮಾಂಟಿ ಹಾಗೂ ಫೆರ್ಡಿ ಮತ್ತು ನೆಚ್ಚಿನ ನಾಯಿಯಾಗಿ ಪ್ಲೂಟೋ ಕೂಡ ಸೇರ್ಪಡೆಯಾದವು.



"ಸ್ಟೀಮ್‌ಬೋಟ್ ವಿಲ್ಲಿ"ಯ ಮಿಕ್ಕಿ

ಪ್ರಾರಂಭದ ದಿನಗಳಲ್ಲಿ ಮಿಕ್ಕಿಮೌಸ್‌ಗೆ ಧ್ವನಿ ನೀಡುತ್ತಿದ್ದದ್ದು ವಾಲ್ಟ್ ಡಿಸ್ನಿಯೇ. ನಂತರ ಈ ಅವಕಾಶ ಜಿಮ್ ಮೆಕ್‌ಡೊನಾಲ್ಡ್ (1946ರಿಂದ 1974ರವರೆಗೆ) ಹಾಗೂ 1974ರಿಂದ ಮುಂದಕ್ಕೆ ವೇಯ್ನ್ ಆಲ್‌ಬ್ರೈಟ್‌ರಿಗೆ ಲಭಿಸಿತು. ಪತ್ರಿಕೆಗಳಲ್ಲಿ ಮಿಕ್ಕಿಯ ಮೊದಲ ಕಾರ್ಟೂನ್ "**ಲಾಸ್ಟ್ ಆನ್ ಎ ಡೆಸರ್ಟ್ ಐಲೆಂಡ್**" 1930ರಲ್ಲಿ ಪ್ರಕಟವಾಯಿತು. ಉಬ್ ಇವರ್ಕ್ಸ್ ಚಿತ್ರಿಸುತ್ತಿದ್ದ ಈ ಸರಣಿಯ ಮೊದಲ ಕಥೆಗಾರರಾಗಿದ್ದದ್ದು ವಾಲ್ಟ್ ಡಿಸ್ನಿಯೇ ಆದರೂ ಕೆಲದಿನಗಳಲ್ಲೇ ಈ ಜವಾಬ್ದಾರಿಯನ್ನು ಫ್ಲಾಯ್ಡ್ ಗಾಟ್‌ಫ್ರೆಡ್‌ಸನ್ ವಹಿಸಿಕೊಂಡರು. ಶೀಘ್ರದಲ್ಲೇ ಮಿಕ್ಕಿ ಪಾತ್ರವಹಿಸಿದ್ದ ಟಿ ವಿ ಕಾರ್ಯಕ್ರಮಗಳೂ ಪ್ರಾರಂಭವಾದವು – ಮಿಕ್ಕಿಯ ಜನಪ್ರಿಯತೆ ಹೆಚ್ಚುತ್ತಲೇ ಹೋಯಿತು.




ವಾಲ್ಟ್ ಡಿಸ್ನಿಯೊಂದಿಗೆ ಮಿಕ್ಕಿ

"ಚಾರ್ಲಿ ಚಾಪ್ಲಿನ್‌ರ ಕಾರ್ಟೂನ್ ರೂಪ" ಎಂದು ಕರೆಯಲ್ಪಟ್ಟಿರುವ ಮಿಕ್ಕಿಯ ನಿರ್ಮಾಣಕ್ಕಾಗಿ ವಾಲ್ಟ್ ಡಿಸ್ನಿಗೆ 1932ರಲ್ಲಿ ವಿಶೇಷ ಆಸ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಂದೆ ವಾಲ್ಟ್ ಡಿಸ್ನಿ ಸಂಸ್ಥೆ ನಿರ್ಮಿಸಿದ ಅನೇಕ "ಡಿಸ್ನಿಲ್ಯಾಂಡ್" ಹಾಗೂ "ಡಿಸ್ನಿವರ್ಲ್ಡ್"ಗಳಲ್ಲಿ ಮಿಕ್ಕಿಗೆ ವಿಶೇಷ ಸ್ಥಾನ ನೀಡಲಾಗಿದೆ.

"ಈ ಭೂಮಿಯ ಮೇಲಿನ ಸಾರ್ವಕಾಲಿಕ ಶ್ರೇಷ್ಟ ಇಲಿ" ಮಿಕ್ಕಿಮೌಸ್ ಈಗ ಎಪ್ಪತ್ತೈದನೇ ವರ್ಷಕ್ಕೆ ಕಾಲಿರಿಸಲಿದೆ. ಈ ವಿಶಿಷ್ಟ ಸಂದರ್ಭದಲ್ಲಿ ಈ ವಿಶಿಷ್ಟ ಇಲಿಗೆ ಹಾರ್ದಿಕ ಶುಭಾಶಯಗಳನ್ನು ಹೇಳೋಣ!

"ಹ್ಯಾಪಿ ಬರ್ತ್‌ಡೇ ಮಿಕ್ಕಿಮೌಸ್!"

